ಐಡಿಯಾಗಳು ಹೇಗೆ ಇರೇಸ್ ಮಾಡ್ತಾ ಇದ್ದೇವೆ ಅನ್ನೋದನ್ನು ಸೂಚಿಸುತ್ತೆ. ಇದನ್ನು ನಾನು 'ಇರೇಸರ್ ಪ್ರೊ' ಅಂತ ಬರೆದಿದ್ದೆ.

**◆ ಈ ವೈರುಧ್ಯ ನಿಮ್ಮ 'ಐರನ್ ಏಜ್' ಕೃತಿಯಲ್ಲೂ ಇದೆ. ಕಬ್ಬಿಣ ದೃಢತೆಯ ಸಂಕೇತ. ಆದರೆ, ಇಲ್ಲಿ ಕಬ್ಬಿಣದ ಪ್ರತಿಮೆಯಲ್ಲಿ ಕಾಲು ಉಳಿದಿದೆ. ದೇಹ ಕರಗಿದೆ. ಮರದ ಪ್ರತಿಮೆ ಗೆದ್ದಲಿಗೆ ಆಹಾರವಾಗಿ ನಾಶವಾಗುತ್ತೆ. ನಾಶದಲ್ಲೇ ಅದಕ್ಕೊಂದು ಹೊಸ ಆಕೃತಿಯೂ ಸಿಗುತ್ತಿದೆ.**

ಈ ವೈರುಧ್ಯಕ್ಕಿಂತಲೂ ಇನ್ ಬಿಟ್ವೀನ್ ಸ್ಪೇಸ್ ಏನಿದೆ, ಅತ್ಲಾಗೂ ಅಲ್ಲ ಇತ್ಲಾಗೂ ಅಲ್ಲದ ತ್ರಿಶಂಕು ಸ್ಥಿತಿ, ಅದು ಬಹಳ ಇಂಟರೆಸ್ಟಿಂಗ್. ಅದು ನಮ್ಮ ಜೀವನದಲ್ಲಿ ನಿರಂತರ ಇದೆ. ನೀವು ಯಾವುದೇ ಶಿಲ್ಪ ತಕ್ಕೊಳ್ಳಿ. ಪರಂಪರೆಯಿಂದ ಬಂದ ಶಿಲ್ಪಗಳು ಐಕಾನಿಕ್ ಆಗಿ ನಿಂತಿರುತ್ತವೆ. ಆ ಅವಸ್ಥೆಯಲ್ಲಿ ಸಂಪೂರ್ಣ ಆದ ಮೇಲೆ ಅಷ್ಟು ಕುತೂಹಲ ಇರಲ್ಲ. ಅದು ನಿಲ್ಲುವಂತಹ ಸ್ಥಿತ್ಯಂತರದ ಸಮಯದ ಬಗ್ಗೆ ಆಲೋಚನೆ ಮಾಡುವುದು ರೋಚಕತೆ ಕೊಡ್ತದೆ. ಸ್ಥಿತ್ಯಂತರ ಸಾಮಾನ್ಯವಾಗಿ ನಡೀತಾ ಇರೋದಿಲ್ಲ. ವಿಶೇಷ ಸಂದರ್ಭದಲ್ಲಿ ಮಾತ್ರ ನಡೆಯುತ್ತೆ. ಒಂದು ಶಿಲ್ಪದಲ್ಲಿ ಒಂದು ಆನೆ ಎದುರುಗಡೆಯಿಂದ ನೋಡುವಾಗ ಸೊಂಡಿಲನ್ನು ಚಾಚಿ ಸ್ವಾಗತ ಮಾಡೋ ತರಹ ಇದೆ. ಆದರೆ, ಹಿಂದುಗಡೆಯಿಂದ ಅದು ಲದ್ದಿಹಾಕುತ್ತಿರುವ ಹಾಗೆ ಕಾಣುತ್ತೆ. ಆನೆಯಂಥ ದೊಡ್ಡ ಪ್ರಾಣಿ ಸಣ್ಣಲದ್ದಿ ಹಾಕಕ್ಕೂ ಬಹಳ ಕಷ್ಟ ಪಡುತ್ತೆ.

**◆ ನಿಮ್ಮ ಶಿಲ್ಪಗಳಲ್ಲಿ ಪ್ರಾಣಿ ಅಥವಾ ಮನುಷ್ಯ ಆಕೃತಿಗಳಿಗೆ ಮುಖಚಹರೆ ಇಲ್ಲ.**

ಕೆಲವು ಸಂದರ್ಭಗಳಲ್ಲಿ ಕೆಲವು ವಿಷಯವನ್ನ ಅತಿ ಇಲ್ಲಸ್ಟ್ರೇಟ್ ಮಾಡುವ ಅಗತ್ಯ ಇರೋದಿಲ್ಲ. ನೀವು ಕೊಡುವ ಹೇಳಿಕೆ ಏನಿದೆ ಅಥವಾ ಏನು ಸಂವಹನ ಮಾಡಬೇಕಂತ ಇದ್ದೀರಿ, ಅಲ್ಲಿ ಕೆಲವು ಭಾಗಗಳ ಅಗತ್ಯ ಇರುವುದಿಲ್ಲ. ಅಗತ್ಯ ಇಲ್ಲದಾಗ ಅವುಗಳನ್ನು ಪುನಃ ತೋರಿಸಿ ಪ್ರಾಮುಖ್ಯತೆ ಕೊಡುವುದಕ್ಕಿಂತ, ಏನು ಹೇಳಬೇಕೊ ಅಷ್ಟನ್ನು ಹೇಳಿ ಉಳಿದದ್ದನ್ನು ಎಡಿಟ್‌ಔಟ್ ಮಾಡಿ ಬಿಡಬೇಕು. ಅನಗತ್ಯ ಗೋಜಲುಗಳು ಯಾಕೆ, ನೀವು ಹೇಳುವ ಪಾಯಿಂಟನ್ನು ಹೇಳಿ ಅಲ್ಲಿಗೆ ಮುಗಿಸಿಬಿಡಿ ಎನ್ನುವುದು ಒಂದು ಕಾರಣವಿರಬಹುದು.

**◆ ನನಗೆ ಹಾಂಟ್ ಮಾಡಿದ್ದು, ನಿಮ್ಮ ಆಸ್ಪತ್ರೆಯ ಕೊಳೆತ ಬೆಡ್‌ಗಳ ಕಲಾಕೃತಿ.**

ಈ ಕಲಾಕೃತಿ ಹುಟ್ಟಿದ್ದು ಕೊರಿಯಾದ ಒಂದು ಆಯಿಲ್‌ಸ್ಪಿಲ್ ಘಟನೆಯಿಂದ. ಇಲ್ಲಿ ತೈಲಸಾಗಣೆ ಹಡಗುಗಳು ಅಪಘಾತವಾಗಿ ಕಚ್ಚಾತೈಲ ಚೆಲ್ಲಿ ಇಡೀ ವಾತಾವರಣ ಕಪ್ಪಾಗಿ ನಾಲ್ಕೈದು ತಿಂಗಳು ಹಾಗೆಯೇ ಇತ್ತು. ಅದನ್ನ ಕ್ಲೀನ್ ಮಾಡ್ಲಿಕ್ಕಂತ ಹೋದಾಗ ನನ್ನಗನಿಸಿತು, ಇದು ಅಭೂತಪೂರ್ವ ದಾರುಣ ದುರಂತ. ಅದು ಪೆಟ್ರೋಲಿಯಂ ಜೆಲ್ಲಿಯ ಬೈಪ್ರಾಡಕ್ಟ್. ಅದು ಹಲ್ವಾ ತರಹ ಸಮುದ್ರದ ತುಂಬ ಹಸಿಯಾಗಿ ಹರಡಿತ್ತು. ಅದರ ಈ ಕ್ಯಾರೆಕ್ಟರನ್ನು ಕಲಾಕೃತಿಯಲ್ಲಿ ಉಪಯೋಗ ಮಾಡಿದೆ. ಆ ಕಲಾಕೃತಿಯ ಎದುರು ಒಂದು ಫೋರ್ಸೆಪ್ಸ್ ಟೂಲ್ ಇದೆ. ಮಗು ತಾಯಗರ್ಭದಿಂದ ಸರಾಗವಾಗಿ ಹೊರಗೆ ಬರದೆ ಇದ್ದರೆ, ಡಾಕ್ಟರ್ ಇದನ್ನ ಮಗುವಿನ ತಲೆಗೆ ಹಾಕಿ ಹೊರಗೆ ಎಳೀತಾರೆ. ಇದೊಂದು ನನ್ನ ಬಾಲ್ಯದ ಶಾಕಿಂಗ್ ಅನುಭವ. ಸಾಯುವ ಕೊನೇ ಸ್ಟೇಜಲ್ಲಿ ಹಾಅ... ಹಾಅ... ಅಂತ ಬ್ರೀದಿಂಗ್ ಮಾಡಲಿಕ್ಕೆ ಆಗದೆ ಇರುವಂತಹ ಸ್ಥಿತಿಯಲ್ಲಿ ಹೊರಡುವ ಶಬ್ದವನ್ನು ಕಲಾಕೃತಿ ಕೊಡುತ್ತೆ. ಬೆಲೂನು ಮಾದರಿಯ ಈ ಶಿಲ್ಪದಲ್ಲಿ ಗಾಳಿ ಹೊರಗೆ ಹೋಗುವ ರೀತಿಯಲ್ಲಿ ಶಬ್ದ ಅಳವಡಿಸಿದೆ. ಇಲ್ಲಿ ಮನುಷ್ಯನ ಹಾಜರಾತಿ ಇಲ್ಲದೆಯೂ ಮನುಷ್ಯನನ್ನ ಫೀಲ್ ಮಾಡಬಹುದು. ಆದ್ದರಿಂದಲೇ ನಿಮಗೆ ಅದು ಹಾಂಟ್ ಮಾಡುವಷ್ಟು ಪವರ್‌ಫುಲ್ಲಾಗಿ ಕಂಡಿದೆ.

**◆ ಚೀನಾಕ್ಕೆ, ಭಾರತಕ್ಕೆ ಇರೋಹಂಗೆ ಕೊರಿಯಕ್ಕೆ ಪ್ರಾಚೀನ ಸಾಂಪ್ರದಾಯಿಕ ಪರಂಪರೆ ಇಲ್ಲ. ಅದು ಅತಿ ಆಧುನಿಕವಾದ ಮತ್ತು ಅಮೆರಿಕದ ಅನುಕರಣೆ. ಇಂಥ ದೇಶಕ್ಕೆ ಮ್ಯೂಸಿಯಂಗಳ ಅಗತ್ಯ ಇರಬಹುದು. ಕಾರಂತರು ಯೂರೋಪಿನ ಪ್ರವಾಸ ಕಥನ 'ಅಪೂರ್ವ ಪಶ್ಚಿಮ'ದಲ್ಲಿ ಮ್ಯೂಸಿಯಂಗಳ ಚಿತ್ರಣವಿದೆ. ಅವರು ಭಾರತದಲ್ಲಿ**